# ಸವಿತಾ ನಾಗಭೂಷಣ ಅವರ ಕವನಗಳಲ್ಲಿ ಆಧುನಿಕೋತ್ತರ ಸಂವೇದನೆಗಳು

**ಮೋಹನ ಬೆಣಚಮರ್ಡಿ**
ಕನ್ನಡ ಅಧ್ಯಾಪಕರು, ಕೆ.ಎಲ್.ಇ.ಸಂಸ್ಥೆಯ ಎಸ್.ವಿ.ಎಸ್ ಬೆಳ್ಳುಬ್ಬಿ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಸವದತ್ತಿ, ಬೆಳಗಾವಿ ಜಿಲ್ಲೆ.

DOI: https://doi.org/10.5281/zenodo.18701242

## ABSTRACT:

ಸ್ತ್ರೀಯರು ತಮ್ಮ ಅನುಭವ, ಕನಸು ಮತ್ತು ಹೋರಾಟಗಳನ್ನು ಸಾಹಿತ್ಯ, ಕಲೆ ಹಾಗೂ ಕಾವ್ಯಗಳ ಮೂಲಕ ನಿರ್ಭೀತವಾಗಿ ಹೇಳಿಕೊಳ್ಳುವಂತಾಗಬೇಕು. ಶಿಕ್ಷಣ, ಉದ್ಯೋಗ, ಆರ್ಥಿಕ ಸ್ವಾತಂತ್ರ್ಯ ಮತ್ತು ನಿರ್ಧಾರ ಕೈಗೊಳ್ಳುವ ಅಧಿಕಾರದಲ್ಲಿ ಪುರುಷರೊಂದಿಗೆ ಸಮಾನ ಅವಕಾಶಗಳನ್ನು ಕಲ್ಪಿಸಿಕೊಳ್ಳಬೇಕಾದ ವ್ಯವಸ್ಥೆ ನಿರ್ಮಾಣವಾಗಬೇಕಾಗಿದೆ ಹಾಗೂ ಸ್ವಂತಿಕೆಯನ್ನು ಉಳಿಸಿಕೊಂಡು ಸ್ವಾವಲಂಬಿಯಾಗಿ ಬದುಕುವ ಶಕ್ತಿಯನ್ನು ಹೊಂದಬೇಕಾಗಿದೆ. ಸ್ತ್ರೀ ಸಂವೇದನೆಯು ಲಿಂಗ ಸಮಾನತೆಯತ್ತ ಸಾಗುವ ಒಂದು ಪ್ರಮುಖ ಸಾಮಾಜಿಕ ಹಾಗೂ ಸಾಂಸ್ಕೃತಿಕ ಹೆಜ್ಜೆಯಾಗುವ ಆಶಯವನ್ನು ಸವಿತಾ ನಾಗಭೂಷಣ ಅವರ ಕವನಗಳಲ್ಲಿ ಕಾಣುತ್ತೇವೆ. ಪ್ರಾಪಂಚಿಕವಾಗಿ ತನ್ನ ಹಕ್ಕು ಮತ್ತು ವ್ಯಕ್ತಿತ್ವವನ್ನು ಸದೃಢವಾಗಿ ಶಾಶ್ವತವಾಗಿ ನೆಲೆ ನಿಲ್ಲುವ ಗಟ್ಟಿತನ ಸ್ತ್ರೀಯರದ್ದಾಗಬೇಕು ಎಂಬುದು ಸವಿತಾ ನಾಗಭೂಷಣ ಅವರ ಕವನಗಳಲ್ಲಿ ಕಾಣುತ್ತೇವೆ.

## KEYWORDS:

ಸ್ತ್ರೀಯ ಅಸ್ಮಿತೆ, ಸ್ತ್ರೀ ಸಮಾನತೆ, ಸ್ತ್ರೀ ಸ್ವಾತಂತ್ರ್ಯ, ಪರಂಪರೆ, ಆಧುನಿಕತೆ.

ಸವಿತಾ ನಾಗಭೂಷಣ ಅವರು ಕನ್ನಡದ ಪ್ರಮುಖ ಸಂವೇದನಾಶೀಲ ಕವಯತ್ರಿ. ತಾಯ್ತನ, ಪ್ರಕೃತಿ ಮತ್ತು ಅಂತಃಕರಣದ ವಿಚಾರಗಳನ್ನು ಸರಳ, ಮೌನ ಮತ್ತು ಸಂಯಮದ ಶೈಲಿಯಲ್ಲಿ ವ್ಯಕ್ತಪಡಿಸುವುದು ಇವರ ಕಾವ್ಯದ ವೈಶಿಷ್ಟ್ಯವಾಗಿದೆ.

ಮಹಿಳೆಯರು ತಮ್ಮ ದೈನಂದಿನ ಬದುಕಿನಲ್ಲಿ ಎದುರಿಸುವ ಶೋಷಣೆ, ತಾರತಮ್ಯ ಮತ್ತು ನೋವುಗಳನ್ನು ಗ್ರಹಿಸಿ ತಮ್ಮದೇ ಆದ ದೃಷ್ಟಿಕೋನದಲ್ಲಿ ಅಭಿವ್ಯಕ್ತಗೊಳಿಸುವ ಶಕ್ತಿಯಾಗಬೇಕು. ಮಹಿಳೆಯರ ಆತ್ಮಗೌರವ, ಸಮಾನತೆ ಮತ್ತು ಸ್ವಾತಂತ್ರ್ಯದ ಆಶಯವನ್ನು ಸಾಹಿತ್ಯ ಹಾಗೂ ಸಮಾಜದಲ್ಲಿ ವ್ಯಕ್ತಪಡಿಸುವ ಪ್ರಜ್ಞಾಪೂರ್ವಕ ಜ್ಞಾನ ಮೂಡುವಂತಾಗಬೇಕು ಎಂಬುದನ್ನು ಸವಿತಾ ನಾಗಭೂಷಣ ಅವರ ಕವನಗಳಲ್ಲಿ ಕಾಣುತ್ತೇವೆ. ಜೊತೆಗೆ ಸ್ತ್ರೀಯರು ಪಿತೃಪ್ರಧಾನ ವ್ಯವಸ್ಥೆಯಲ್ಲಿ ಅನುಭವಿಸುವ ಸಂಕಷ್ಟಗಳನ್ನು ಗುರುತಿಸಿ ಅವಳೂ ಮನುಷ್ಯಳೆಂದು ಪರಿಗಣಿಸುವ ಮನೋಭಾವ ಮೂಡಬೇಕಾಗಿದೆ. ಸ್ತ್ರೀಯರು ತಮ್ಮ ಅನುಭವ, ಕನಸು ಮತ್ತು ಹೋರಾಟಗಳನ್ನು ಸಾಹಿತ್ಯ, ಕಲೆ ಹಾಗೂ ಕಾವ್ಯಗಳ ಮೂಲಕ ನಿರ್ಭೀತವಾಗಿ ಹೇಳಿಕೊಳ್ಳುವಂತಾಗಬೇಕು. ಶಿಕ್ಷಣ, ಉದ್ಯೋಗ, ಆರ್ಥಿಕ ಸ್ವಾತಂತ್ರ್ಯ ಮತ್ತು ನಿರ್ಧಾರ ಕೈಗೊಳ್ಳುವ ಅಧಿಕಾರದಲ್ಲಿ ಪುರುಷರೊಂದಿಗೆ ಸಮಾನ ಅವಕಾಶಗಳನ್ನು ಕಲ್ಪಿಸಿಕೊಳ್ಳಬೇಕಾದ ವ್ಯವಸ್ಥೆ ನಿರ್ಮಾಣವಾಗಬೇಕಾಗಿದೆ ಹಾಗೂ ಸ್ವಂತಿಕೆಯನ್ನು ಉಳಿಸಿಕೊಂಡು ಸ್ವಾವಲಂಬಿಯಾಗಿ ಬದುಕುವ ಶಕ್ತಿಯನ್ನು ಹೊಂದಬೇಕಾಗಿದೆ. ಸ್ತ್ರೀ ಸಂವೇದನೆಯು ಲಿಂಗ ಸಮಾನತೆಯತ್ತ ಸಾಗುವ ಒಂದು ಪ್ರಮುಖ ಸಾಮಾಜಿಕ ಹಾಗೂ ಸಾಂಸ್ಕೃತಿಕ ಹೆಜ್ಜೆಯಾಗುವ ಆಶಯವನ್ನು ಸವಿತಾ ನಾಗಭೂಷಣ ಅವರ ಕವನಗಳಲ್ಲಿ ಕಾಣುತ್ತೇವೆ.

ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆ, ತಾಯಿ ತಾನೇ ಮೊದಲ ಗುರುವೆಂಬಂತೆ ಸವಿತಾ ನಾಗಭೂಷಣ ಅವರ "ತಾಯಿ" ಕವನವು ಹೆಣ್ಣಿನ ಅದಮ್ಯ ಶಕ್ತಿ, ಧಾರಣ ಶಕ್ತಿ, ವಾತ್ಸಲ್ಯ ಮತ್ತು ಪ್ರಶ್ನಿಸುವ ಮನೋಭಾವವನ್ನು ಎತ್ತಿ ಹಿಡಿಯುತ್ತದೆ. ಕೇವಲ ತಾಯ್ತನದ ಭಾವನೆಗೆ ಸೀಮಿತವಾಗದೆ ಮನೆ ಮಕ್ಕಳನ್ನು ಬೆನ್ನಿಗೆ ಕಟ್ಟಿಕೊಂಡು ಬದುಕಿನ ಸವಾಲುಗಳನ್ನು ಎದುರಿಸುವ ಹೆಣ್ಣಿನ ಧೈರ್ಯ, ತ್ಯಾಗ ಮತ್ತು ಸಾಂತ್ವನ ನೀಡುವ ಅವಳ ಶಕ್ತಿಯನ್ನು ತಾಯಿ ಕವನದಲ್ಲಿ ಕಾಣುತ್ತೇವೆ. ಹೆಣ್ಣು ಕೇವಲ ಸುಕೋಮಲಳಲ್ಲ, ಬದಲಾಗಿ ಅಸಾಧಾರಣ ಶಕ್ತಿಯ ಕೇಂದ್ರ ಎಂಬುದನ್ನು ಹಾಗೂ ತಾಯಿಯ ತ್ಯಾಗ, ಸಹನೆ ಮತ್ತು ವಾತ್ಸಲ್ಯದ ವಿಶಾಲತೆಯನ್ನು ಈ ಕವನದಲ್ಲಿ ಚಿತ್ರಿಸಲಾಗಿದೆ. ಮನೆ ಮತ್ತು ಸಂಸಾರವನ್ನು ನಿಭಾಯಿಸುತ್ತಲೇ ಕಷ್ಟಗಳನ್ನು ಎದುರಿಸುವ ಹೆಣ್ಣಿನ ಆತ್ಮವಿಶ್ವಾಸವನ್ನು ಈ ಕವನದಲ್ಲಿ ಕಾಣುತ್ತೇವೆ. ತಾಯ್ತನದ ಮೂಲಕವೇ ಬದುಕು ದೌರ್ಜನ್ಯಗಳನ್ನು ಎದುರಿಸಿ ಸಾಂತ್ವನದ ದಾರಿ ಹುಡುಕುವ ಪ್ರಯತ್ನವನ್ನು ಸವಿತಾ ನಾಗಭೂಷಣ ಅವರ 'ತಾಯಿ' ಕವನದಲ್ಲಿ ಕಾಣುತ್ತೇವೆ.

**ತಾಯಿ ದುರ್ಗೆಯ ನಿಜವನರಿಯುವ**
**ಧೀರರಾರೊ ಜಗದೊಳು!**
**ಆರು ದರುಶನ ವೇದ ಶಾಸ್ತ್ರ**
**ಪುರಾಣವರಿಯದು ಅವಳನು**[1]

ಆದಿಕಾಲದಿಂದಲೂ ಹೆಣ್ಣುಮಕ್ಕಳ ಸ್ಥಾನಮಾನ ನೋಡುವುದಾದರೆ ಪುರುಷ ಪ್ರಧಾನ ವ್ಯವಸ್ಥೆ ಹೆಣ್ಣುಮಕ್ಕಳನ್ನು ದ್ವಿತೀಯ ದರ್ಜೆಯ ಪ್ರಜೆಯಾಗಿ ಕಾಣುತ್ತಾ ಬಂದಿದೆ. ಪರಂಪರೆ ಹೆಣ್ಣು ಮಗುವನ್ನು ನಿರಾಕರಿಸಿದರೆ ಸವಿತಾ ನಾಗಭೂಷಣ ಅವರ 'ತಂಗಿ ಹುಟ್ಟಿದಳು' ಕವನವು ಆಧುನಿಕತೆಯ ಸಂಕೇತವೆಂಬಂತೆ ಅಕ್ಕ ತಂಗಿಯ ಕೈ ಹಿಡಿದು ಹೊಸ ಜಗತ್ತಿಗೆ ಕರೆದೊಯ್ಯುವ ಭರವಸೆಯನ್ನು ನೀಡುತ್ತಿದ್ದಾಳೆ. ಈ ಮೂಲಕ ಕವಯತ್ರಿ ಆಧುನಿಕ ಸಮಾಜದಲ್ಲಿ ಹೆಣ್ಣು ಮಕ್ಕಳನ್ನು ಪ್ರೀತಿಯಿಂದ ಬರಮಾಡಿಕೊಳ್ಳುವ, ಸ್ತ್ರೀಯರಿಗೆ ಹೊಸ ಜಗತ್ತು ತೆರೆದುಕೊಳ್ಳುವ ಸೂಚನೆಯನ್ನು, ಆಶಯವನ್ನು ತಮ್ಮ ಕವನದ ಮೂಲಕ ಅಭಿವ್ಯಕ್ತಿಸಿದ್ದಾರೆ.

**ಹಿಡಿಯಷ್ಟಿರುವ ತಂಗಿಯನು**
**ಮುಡಿಯಷ್ಟಿರುವ ಅಕ್ಕ**
**ಅಕ್ಕರೆಯಿಂದ ಅಪ್ಪುವಳು**
**ಅಭಯ ನೀಡುವಳು**[2]

ಪರಂಪರಾಗತವಾಗಿ ಬಂದಂತಹ ಸ್ತ್ರೀ ಶೋಷಣೆ, ತಾರತಮ್ಯ ಮತ್ತು ನೋವುಗಳನ್ನು ಅವಲೋಕಿಸಿದ ಕವಯತ್ರಿಯವರು ಇಂದಿನ ದಿನಗಳಲ್ಲಿ ಹಳೆಯ ಮೌಢ್ಯತೆಗಳು ಇಂದು ಅಪ್ರಸ್ತುತ ಎಂಬುದನ್ನು 'ಲೋಕದಲ್ಲಿ ಪುಟ್ಟಿದ ಬಳಿಕ' ಎಂಬ ಕವನದ ಮೂಲಕ ಸ್ತ್ರೀ ಸಮಾನತೆ ಮತ್ತು ಸ್ವಾತಂತ್ರ್ಯದ ನಿಲುವನ್ನು ಸ್ಪಷ್ಟಪಡಿಸಿರುವುದನ್ನು ಕಾಣುತ್ತೇವೆ. ಸೀತೆ, ದ್ರೌಪದಿ, ಶಕುಂತಲೆ, ಭಾಗೀರಥಿ, ಮಹಾಸತಿಯರನ್ನು ಆದರ್ಶವಾಗಿ ಇಟ್ಟುಕೊಳ್ಳಬೇಕೆನ್ನುವ ಸಾಂಪ್ರದಾಯಿಕ ನಿಲುವನ್ನು ಧಿಕ್ಕರಿಸುವುದನ್ನು ಕಾಣುತ್ತೇವೆ. ಆತ್ಮಕ್ಕೆ ಲಿಂಗಭೇದವಿಲ್ಲವೆಂದಾಗ ಪುರುಷನಿಗಿಲ್ಲದ ಈ ನಿಲುವುಗಳು ತನಗೂ ಬೇಕಿಲ್ಲವೆನ್ನುವಲ್ಲಿ ಆಧುನಿಕತೆಯ ಪ್ರಕ್ರಿಯೆ ಮಹಿಳೆಯರನ್ನು ಜಾಗೃತಿಸಿರುವುದನ್ನು ಅವಲೋಕಿಸಬಹುದು.

**"ಸೀರೆ ಸುತ್ತಿಕೊಳ್ಳುವಾಗ ದ್ರೌಪದಿ**
**ಉಂಗುರ ಎತ್ತಿಕೊಳ್ಳುವಾಗ ಶಕುಂತಲೆ**
**ಒಲೆ ಹೊತ್ತಿಕೊಳ್ಳುವಾಗ ಸೀತೆ**

**ಯಾಕೆ, ಯಾಕೆ ನೆನಪಾಗಬೇಕು?''...**

**''ನಡುವೆ ಸುಳಿವಾತ್ಮ**
**ಗಂಡೂ ಅಲ್ಲ ಹೆಣ್ಣೂ ಅಲ್ಲ**
**ಯಾವುದಕೂ ಪ್ರಮಾಣಿಸಬೇಕು''[3]**

ಹಾಗೆಯೇ ಅವರ 'ಕೊಂಡ ಹಾಯುವವಳು' ಕವನವು ಹೆಣ್ಣಿನ ಅದಮ್ಯ ಚೇತನ, ಸಹನ ಶೀಲತೆ ಮತ್ತು ಕಷ್ಟಗಳನ್ನು ಎದುರಿಸಿ ಮುನ್ನಡೆಯುವ ಶಕ್ತಿಯನ್ನು ಚಿತ್ರಿಸುತ್ತದೆ. ಸಂಸಾರ, ಬಡತನ ಮತ್ತು ಪತಿಯ ಅಸಹಕಾರ ನಡುವೆಯೂ ತನ್ನ ಮಕ್ಕಳಿಗಾಗಿ ಮತ್ತು ಬದುಕಿಗಾಗಿ ಕಷ್ಟಗಳನ್ನು ಧೈರ್ಯದಿಂದ ದಾಟುವ ಹೆಣ್ಣಿನ ಸಾಂಕೇತಿಕ ಚಿತ್ರಣ ಕಾಣುತ್ತೇವೆ. ಗಂಡ, ಮನೆ, ಮಕ್ಕಳ ಜವಾಬ್ದಾರಿಯನ್ನು ಬೆನ್ನಿಗೆ ಕಟ್ಟಿಕೊಂಡು ಸಾಲ ಮತ್ತು ಹಸಿವಿನ ನಡುವೆಯು ಬದುಕನ್ನು ಸಾಗಿಸುವ ಛಲವನ್ನು ಸ್ತ್ರೀಯರಲ್ಲಿ ಕಾಣುತ್ತೇವೆ.

**''ಕಾಲು ಸುಡದೇ?**
**ಇಲ್ಲ ಎನ್ನುವರು!**
**ಅಗೋ ಲಕುಮಿ**
**ನನ್ನ ನೆರೆ ಮನೆಯವಳು**
**ಹಾಯುತಿದ್ದಾಳೆ ಕೊಂಡ''[4]**

ಆಧುನಿಕ ಮಹಿಳೆ ಕೇವಲ ಅಡುಗೆ ಮನೆಗೆ ಸೀಮಿತವಲ್ಲ. ಬದಲಾಗಿ ಆಕೆ ಅದಮ್ಯ ಚೈತನ್ಯದ ಪ್ರತೀಕ. ಸಮಾಜ ಹೆಣ್ಣಿನ ಮೇಲೆ ಹೇರುವ ಚೌಕಟ್ಟುಗಳು, ಸಂಪ್ರದಾಯಗಳು ಮತ್ತು ಅವಳ ಅಸಹಾಯಕತೆಯ ಚಿತ್ರಣಗಳನ್ನು ಧಿಕ್ಕರಿಸಿ ತನ್ನ ಹಾದಿಯನ್ನು ತಾನೇ ಆರಿಸಿಕೊಂಡು ಎದುರಾಗುವ ಸವಾಲುಗಳು ಎದುರಿಸುವ ಛಲವನ್ನು ''ಧಿಕ್ಕರಿಸುತ್ತೇನೆ'' ಕವನದಲ್ಲಿ ಕಾಣುತ್ತೇವೆ.

**''ನಿನ್ನ ಪಂಜಿನಂತ ಕೈಗಳು**
**ಸುಕೋಮಲ ಹೂಗಳನ್ನು**
**ಹೊಸಕಿ ಹಾಕುವುದನ್ನೂ**
**ನಿನ್ನ ಕೆಂಡದಂತ ಕಣ್ಣುಗಳು**
**ಕೋಗಿಲೆಯ ಹಾಡುಗಳನ್ನು**
**ನಿಷ್ಕರುಣೆಯಿಂದ ಸುಡುವುದನ್ನೂ**
**ಧಿಕ್ಕರಿಸುತ್ತೇನೆ''[5]**

ಒಟ್ಟಾರೆಯಾಗಿ ಸವಿತಾ ನಾಗಭೂಷಣ ಅವರ ಕವನಗಳು ಸ್ತ್ರೀಯ ಅಸ್ತಿತ್ವವನ್ನು, ಅವಳ ಪಾತ್ರವನ್ನು ಮತ್ತು ಸಮಾನತೆಯನ್ನು ಸಾರುತ್ತವೆ. ಸ್ತ್ರೀಯ ಸಂಕಷ್ಟದ ಬದುಕನ್ನು ಚಿತ್ರಿಸುತ್ತಲೇ ಅವಳಲ್ಲಿ ಅಡಗಿರುವ ಧೈರ್ಯ ಮತ್ತು ಭರವಸೆಗಳನ್ನು ಬಿಂಬಿಸುತ್ತವೆ. ಸ್ತ್ರೀಯ ಅಸ್ಮಿತೆ, ಸ್ವಾಯತ್ತತೆ ಮತ್ತು ಅನ್ಯಾಯದ ವಿರುದ್ಧ ಧೀಮಂತ ಪ್ರತಿಭಟನೆಯನ್ನು ಪ್ರತಿಬಿಂಬಿಸುವ ಸ್ಥಿತಿಯ ಜೊತೆಗೆ ತನ್ನ ಆಸೆ ಆಕಾಂಕ್ಷೆಗಳಿಗೆ ಮಹತ್ವ ನೀಡಿ ತನಗಾಗಿ ಒಂದು ವಿಶಿಷ್ಟವಾದ ಬದುಕನ್ನು ನಿರ್ಮಿಸಿಕೊಳ್ಳುವ ಹಂಬಲವು ಸ್ತ್ರೀಯರದ್ದಾಗಬೇಕು. ಪ್ರಾಪಂಚಿಕವಾಗಿ ತನ್ನ ಹಕ್ಕು ಮತ್ತು ವ್ಯಕ್ತಿತ್ವವನ್ನು ಸದೃಢವಾಗಿ ಶಾಶ್ವತವಾಗಿ ನೆಲೆ ನಿಲ್ಲುವ ಗಟ್ಟಿತನ ಸ್ತ್ರೀಯರದ್ದಾಗಬೇಕು ಎಂಬುದು ಸವಿತಾ ನಾಗಭೂಷಣ ಅವರ ಕವನಗಳಲ್ಲಿ ಕಾಣುತ್ತೇವೆ.

## ಕೊನೆ ಟಿಪ್ಪಣಿಗಳು:

1. ನಾಗಭೂಷಣ ಡಿ.ಎಸ್. (ಸಂಗ್ರಹ), (2011) ಸವಿತಾ ನಾಗಭೂಷಣ ಅವರ ಆಯ್ದ ಐವತ್ತು ಕವನಗಳು: ಹಳ್ಳಿದಾರಿ, ಶಿವಮೊಗ್ಗ: ಗಾಂಧಿಗಿರಿ ಹೊತ್ತಿಗೆ, ಪು.ಸಂ. 76
2. ಅದೇ, ಪು.ಸಂ. 60
3. ಅದೇ, ಪು.ಸಂ. 83
4. ಅದೇ, ಪು.ಸಂ. 64
5. ಅದೇ, ಪು.ಸಂ. 14

## ಪರಾಮರ್ಶನ ಗ್ರಂಥಗಳು:

1. ನಾಗಭೂಷಣ ಡಿ.ಎಸ್. (ಸಂಗ್ರಹ), (2011) ಸವಿತಾ ನಾಗಭೂಷಣ ಅವರ ಆಯ್ದ ಐವತ್ತು ಕವನಗಳು: ಹಳ್ಳಿದಾರಿ, ಶಿವಮೊಗ್ಗ: ಗಾಂಧಿಗಿರಿ ಹೊತ್ತಿಗೆ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.